ಓ.ಎಸ್.252-2021

ಪಿ.ಡಬ್ಲು-೧

ದಿ: 03-12-2025 ರಂದು ೨ನೇ ವಾದಿಯನ್ನು ಪುನ: ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**<u>ಪಾಟೀ ಸವಾಲು</u>**: ೧ನೇ ಪ್ರತಿವಾದಿ ಪರ ಶ್ರೀಯುತ ವಿ.ಎನ್.ಆರ್. ವಕೀಲರಿಂದ.

ನನ್ನ ತಂದೆಗೆ ಒಟ್ಟು 4 ಜನ ಗಂಡು ಮಕ್ಕಳು ಮತ್ತು ಒಂದು ಹೆಣ್ಣು ಮಗು ಎಂದರೆ ಸರಿ. ನನ್ನ ತಂದೆ ಜೀವಂತ ಇರುವ ಸಮಯದಲ್ಲಿ ಮನೆಯ ನಿರ್ವಹಣೆಯನ್ನು ನನ್ನ ತಂದೆ ನಿರ್ವಹಿಸುತ್ತಿದ್ದರು ಎಂದರೆ ಸರಿ. ನನ್ನ ತಂದೆ ಜೀವಂತ ಇರುವ ಸಮಯದಲ್ಲಿ ದೊಡ್ಡ ದುನ್ನಸಂದ್ರ ಗ್ರಾಮದ ಸರ್ವೆ ನಂ.38/2 ಮತ್ತು 66/1 ಜಮೀನುಗಳನ್ನು ಖರೀದಿಸಿರುತ್ತಾರೆ ಎಂದರೆ ಸರಿ. ನಮ್ಮ ತಂದೆ ನಮ್ಮ ಕುಟುಂಬದ ನಿರ್ವಹಣೆ ಸಮಯದಲ್ಲಿ ಎಲ್ಲಾ ಜಮೀನುಗಳನ್ನು ತಮ್ಮ ಹೆಸರಿಗೆ ಖರೀದಿಸುತ್ತಿದ್ದರು ಎಂದರೆ ಸರಿ.

2. ನಾನು 8ನೇ ತರಗತಿವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನಾನು ನನ್ನ ಸಹೋದರಿಯ ಮಗಳನ್ನು ಮದುವೆ ಆಗಿರುತ್ತೇನೆ ಎಂದರೆ ಸರಿ. ನಮ್ಮ ಕುಟುಂಬದಲ್ಲಿ ೧ನೇ ಪ್ರತಿವಾದಿ ಮಾತ್ರ ಸರ್ಕಾರಿ ನೌಕರರಾಗಿರುತ್ತಾರೆ ಎಂದರೆ ಸರಿ. ಜೂನ್ 1988 ನೇ ಸಾಲಿನಲ್ಲಿ ೧ನೇ ಪ್ರತಿವಾದಿಯ ಮದುವೆ ಜರುಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಅಕ್ಟೋಬರ್ 1988 ನೇ ಸಾಲಿನಲ್ಲಿ ೧ನೇ ಪ್ರತಿವಾದಿಯು ಪವರ್ ಗ್ರಿಡ್ ಕಂಪನಿಯಲ್ಲಿ ನೇಮಕಾತಿ ಹೊಂದಿರುತ್ತಾರೆ ಎಂದರೆ ಸರಿ. ಆ ರೀತಿ ೧ನೇ ಪ್ರತಿವಾದಿ ಕೆಲಸ ಪಡೆದುಕೊಂಡ ನಂತರ ಬಾಯಿ ಮಾತಿನ ಮೂಲಕ ನಾವುಗಳು ಬೇರೆ ಬೇರೆಯಾಗಿ ವಾಸ ಮಾಡಿಕೊಂಡಿದ್ದೇವು ಎಂದರೆ ಸರಿಯಲ್ಲ. ಆ ರೀತಿ ನಾವುಗಳು ಬೇರೆ ಬೇರೆ ಆದ ನಂತರ ೨ನೇ ಪ್ರತಿವಾದಿ ದೊಡ್ಡದುನ್ನಸಂದ್ರ ಗ್ರಾಮದಲ್ಲಿ ಸ್ವಯಾರ್ಜಿತ ಆಸ್ತಿಯನ್ನು ಹೊಂದಿರುತ್ತಾರೆ ಎಂದರೆ ಸರಿ. ಆ ರೀತಿ ನಾವುಗಳು ಬೇರೆ ಆದ ನಂತರ ನಾನು ದೊಡ್ಡದುನ್ನಸಂದ್ರ ಗ್ರಾಮದ ಕೃಷ್ಣಾ ರೆಡ್ಡಿ ಬಡಾವಣೆಯಲ್ಲಿ ಎರಡು ನಿವೇಶನಗಳನ್ನು ಖರೀದಿಸಿರುತ್ತೇನೆ ಎಂದರೆ ಸರಿ. ಆ ರೀತಿ ನಾವುಗಳು ಬಾಯಿ ಮಾತಿನ ಮೂಲಕ ವಿಭಾಗವಾದ ನಂತರ ದಿ: 11.06.2013 ರಂದು ಪಂಚಾಯ್ತಿ ವಿಭಾಗ ಪತ್ರವನ್ನು ಮಾಡಿಕೊಂಡಿರುತ್ತೇವೆ ಎಂದರೆ ಸರಿ. ಈಗ ನನಗೆ ತೋರಿಸಿದ ದಾಖಲೆ ಸದರಿ ಪಂಚಾಯ್ತಿ ವಿಭಾಗ ಪತ್ರ ಆಗಿರುತ್ತದೆ ಎಂದರೆ ಸರಿ. ಸದರಿ ದಿ: 11.06.2013 ರ ಪಂಚಾಯ್ತಿ ವಿಭಾಗ ಪತ್ರದ ನಕಲು ಪ್ರತಿಯನ್ನು ಸಾಕ್ಷಿ ನೋಡಿ ಗುರುತಿಸಿದ ಮೇರೆಗೆ ನಿ.ಡಿ.1 ಎಂದು ಗುರುತಿಸಲಾಯಿತು. ನಿ.ಡಿ.1 ವಿಭಾಗದಂತೆ ನಾವುಗಳು ನಮ್ಮ ಕುಟುಂಬದ ಎಲ್ಲಾ ಆಸ್ತಿಗಳನ್ನು ವಿಭಾಗ ಮಾಡಿಕೊಂಡಿರುತ್ತೇವೆ ಎಂದರೆ ಸರಿ.

3. ದೊಡ್ಡದುನ್ನಸಂದ್ರ ಗ್ರಾಮದ ಸರ್ವೆ ನಂ.44/3 ಜಮೀನಿನಲ್ಲಿ ನನ್ನ ಭಾಗಕ್ಕೆ ಬಂದ 0.01.04 ಗುಂಟೆ ಜಮೀನಿನಲ್ಲಿ ಆರ್.ಸಿ.ಸಿ. ಚಾವಣಿಯ ಮನೆಯನ್ನು ನಿರ್ಮಿಸಿರುತ್ತೇನೆ ಎಂದರೆ ಸರಿ. ದೊಡ್ಡದುನ್ನಸಂದ್ರ ಗ್ರಾಮದ ಸರ್ವೆ ನಂ.38 ಜಮೀನಿನಲ್ಲಿ ನನ್ನ ಭಾಗಕ್ಕೆ ಬಂದ 0.05 ಗುಂಟೆ ಜಮೀನಿನಲ್ಲಿ ಐದು ಮನೆಗಳನ್ನು ನಿರ್ಮಿಸಿ ಬಾಡಿಗೆಗೆ ನೀಡಿರುತ್ತೇನೆ ಎಂದರೆ ಸರಿ. ನಿ.ಡಿ.1 ವಿಭಾಗ ಪತ್ರ ಆದ ನಂತರ ನನ್ನ ಮತ್ತು ನನ್ನ ಕುಟುಂಬದ ಇತರ ಸದಸ್ಯರ ನಡುವೆ ಕೇವಲ ರಕ್ತ ಸಂಬಂಧವಿದ್ದು ಮತ್ತು ಜಮೀನು ಹಾಗೂ ವ್ಯವಹಾರಗಳ ಕುರಿತು ನಮ್ಮ ಗಳ ನಡುವೆ ಯಾವುದೇ ಸಂಬಂಧ ಇರಲಿಲ್ಲ ಎಂದರೆ ಸರಿ. 1997ನೇ ಸಾಲಿನಲ್ಲಿ ೧ನೇ ಪ್ರತಿವಾದಿಗೆ ಸ್ವಂತ ಆದಾಯವಿತ್ತು ಎಂದರೆ ಸರಿ. ೧ನೇ ಪ್ರತಿವಾದಿಯು ದಾವಾ ಆಸ್ತಿಯನ್ನು ತಮ್ಮ ಸ್ವಂತ ಸಂಪಾದನೆಯಲ್ಲಿ ಖರೀದಿಸಿರುತ್ತಾರೆ ಎಂದರೆ ಸರಿಯಲ್ಲ. 1997 ನೇ ಸಾಲಿನಲ್ಲಿ ನಾನು ಮತ್ತು ನಮ್ಮ ಕುಟುಂಬದ ಇತರ ಸದಸ್ಯರು ಬೇರೆ ಬೇರೆಯಾಗಿ ವಾಸಮಾಡಿಕೊಂಡಿದ್ದ ಮೇರೆಗೆ ೧ನೇ ಪ್ರತಿವಾದಿಯು ತನ್ನ ಸ್ವಂತ ಸಂಪಾದನೆಯಲ್ಲಿ ಖರೀದಿಸಿದ್ದ ದಾವಾ ಜಮೀನ್ನನ್ನು ತಮ್ಮ ಹೆಸರಿಗೆ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ.

4. ದಾವಾ ಆಸ್ತಿಯ ಪೂರ್ವ ದಿಕ್ಕಿನಲ್ಲಿ ನಿ.ಡಿ.1 ರಲ್ಲಿ ೧ನೇ ಪ್ರತಿವಾದಿಗೆ ನೀಡಿದ ಆಸ್ತಿ ಇರುತ್ತದೆ ಎಂದರೆ ಸರಿ. ದಾವಾ ಜಮೀನಿನಲ್ಲಿ ಶೆಡ್ ಗಳು ಇವೆ ಎಂದರೆ ಸರಿ. ದಾವಾ ಜಮೀನಿನಲ್ಲಿರುವ ಶೆಡ್ಡುಗಳಿಗೆ ವಿದ್ಯುತ್ ಸೌಲಭ್ಯವನ್ನು ೧ನೇ ಪ್ರತಿವಾದಿ ಹೆಸರಿನಲ್ಲಿ ಪಡೆಯಲಾಗಿರುತ್ತದೆ ಎಂದರೆ ಸರಿ. ಆ ರೀತಿ ವಿದ್ಯುತ್ ಸೌಲಭ್ಯ ಪಡೆದುಕೊಳ್ಳುವ ಸಮಯದಲ್ಲಿ ೧ನೇ ಪ್ರತಿವಾದಿ ಅರ್ಜಿ ಸಲ್ಲಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ೧ನೇ ಪ್ರತಿವಾದಿಯು ದಾವಾ ಆಸ್ತಿಯನ್ನು ಖರೀದಿಸುವ ಸಮಯದಲ್ಲಿ ದಾವಾ ಆಸ್ತಿಯ ಪೂರ್ವ ದಿಕ್ಕಿಗೆ ನಮ್ಮ ತಂದೆಯವರ ಆಸ್ತಿ ಎಂದು ಕಾಣಿಸಿ ಖರೀದಿಸಿರುತ್ತಾರೆ ಎಂದರೆ ಸರಿ.

5. ನಾನು ಪ್ರಸ್ತುತ ದಾವೆಯನ್ನು ದಾಖಲಿಸುವ ಪೂರ್ವದಲ್ಲಿ ೧ನೇ ವಾದಿಗೆ ದಾವೆಯ ಕುರಿತು ಯಾವುದೇ ಮಾಹಿತಿ ನೀಡದೆ ಕೇವಲ ಸಹಿ ಪಡೆದುಕೊಂಡು ದಾವೆ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯು ೧ನೇ ಪ್ರತಿವಾದಿಗೆ ಸೇರಿದ ಆಸ್ತಿ ಯಾದ ಮೇರೆಗೆ ೧ನೇ ವಾದಿಯು ಪ್ರಸ್ತುತ ದಾವೆಯ ನಡವಳಿಯಲ್ಲಿ ಭಾಗವಹಿಸಿರುವುದಿಲ್ಲ ಎಂದರೆ ಸರಿಯಲ್ಲ. ಪ್ರಸ್ತುತ ದಾವೆಯಲ್ಲಿ ನಾನು ೧ನೇ ವಾದಿಯ ಪರವಾಗಿಯು ಸಾಕ್ಷ್ಯ ನುಡಿಯಲು ೧ನೇ ವಾದಿಯಿಂದ ಯಾವುದೇ ಲಿಖಿತ ಅನುಮತಿಯನ್ನು ಪಡೆದುಕೊಂಡಿರುವುದಿಲ್ಲ. ದಾವಾ ಆಸ್ತಿಯು ೧ನೇ ಪ್ರತಿವಾದಿಗೆ ಸೇರಿದ ಆಸ್ತಿ ಯಾದ ಮೇರೆಗೆ 3ನೇ ಪ್ರತಿವಾದಿಯು ಪ್ರಸ್ತುತ ದಾವೆಯ ನಡವಳಿಯಲ್ಲಿ ಭಾಗವಹಿಸಿರುವುದಿಲ್ಲ ಎಂದರೆ ಸಾಕ್ಷಿಯು ೩ನೇ ಪ್ರತಿವಾದಿ ಭಾಗವಹಿಸಿರುತ್ತಾರೆ ಮತ್ತು ೨ನೇ ಪ್ರತಿವಾದಿ ಭಾಗವಹಿಸಿರುವುದಿಲ್ಲ ಎಂದು ನುಡಿಯುತ್ತಾರೆ. ೩ನೇ ಪ್ರತಿವಾದಿಯು ಪ್ರಸ್ತುತ ದಾವೆಯಲ್ಲಿ ಯಾವುದೇ ಪ್ರತಿವಾದ ಪತ್ರವನ್ನು ಸಲ್ಲಿಸಿರುವುದಿಲ್ಲ ಎಂದರೆ ಸರಿ.

6. ನಾನು ೩ನೇ ಪ್ರತಿವಾದಿಯ ಮಗಳನ್ನು ಮದುವೆಯಾಗಿದ್ದು ಮತ್ತು ನಿ.ಡಿ.1 ರಲ್ಲಿ ೩ನೇ ಪ್ರತಿವಾದಿಗೆ ನೀಡಿರುವ ಆಸ್ತಿಗಿಂತಲೂ ಹೆಚ್ಚಿನ ಆಸ್ತಿಯನ್ನು ನೀಡುವಂತೆ ಕೇಳಿದ್ದು ಮತ್ತು ೧ ಮತ್ತು ೨ನೇ ಪ್ರತಿವಾದಿಗಳು ಅದಕ್ಕೆ ಒಪ್ಪದ ಮೇರೆಗೆ ಪ್ರಸ್ತುತ ಸುಳ್ಳು ದಾವೆಯನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ೩ನೇ ಪ್ರತಿವಾದಿಯು ತನಗೆ ಹೆಚ್ಚಿನ ಆಸ್ತಿಯನ್ನು ನೀಡದ ಮೇರೆಗೆ ಪಂಚಾಯ್ತಿ ಮಾಡಿದ್ದರು ಎಂದರೆ ಸರಿಯಲ್ಲ. ೩ನೇ ಪ್ರತಿವಾದಿಯು ವಿಭಾಗ ಕೋರಿ ದಾವೆಯನ್ನು ದಾಖಲಿಸಿರುತ್ತಾರೆ. ಸದರಿ ೩ನೇ ಪ್ರತಿವಾದಿ ದಾಖಲಿಸಿದ್ದಾರೆ ಎಂದು ಹೇಳುವ ದಾವೆಯ ಕ್ರಮ ಸಂಖ್ಯೆ ನನಗೆ ಗೊತ್ತಿಲ್ಲ. ಸದರಿ ೩ನೇ ಪ್ರತಿವಾದಿ ದಾಖಲಿಸಿದ್ದಾರೆ ಎಂದು ಹೇಳುವ ದಾವೆಯಲ್ಲಿ ನನಗೆ ಸಮನ್ಸ ಬಂದಿರುತ್ತದೆ. ಆ ರೀತಿ ನನಗೆ ಬಂದಿದೆ ಎಂದು ಹೇಳುವ ಸಮನ್ಸನ ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ನನಗೆ ಯಾವುದೇ ಅಭ್ಯಂತರ ಇರುವುದಿಲ್ಲ. ಸದರಿ ೩ನೇ ಪ್ರತಿವಾದಿ ದಾಖಲಿಸಿದ್ದ ದಾವೆ ಮುಕ್ತಾಯ ಆಗಿರುತ್ತದೆ. ಆ ರೀತಿ ೩ನೇ ಪ್ರತಿವಾದಿ ಯಾವುದೇ ದಾವೆಯನ್ನು ದಾಖಲಿಸಿರುವುದಿಲ್ಲ ಮತ್ತು ಆ ರೀತಿ ದಾವೆ ದಾಖಲಿಸಿದ್ದರೆ ೧ನೇ ಪ್ರತಿವಾದಿಗೆ ಸಮನ್ಸ ಜಾರಿ ಆಗುತ್ತಿತ್ತು ಎಂದರೆ ಸರಿಯಲ್ಲ.

7. ನಿಪಿ.೪ ರ ಮೂಲ ಪ್ರತಿ ಮಾಲೀಕರಾದ ೧ನೇ ಪ್ರತಿವಾದಿಯ ಬಳಿ ಇರುತ್ತದೆ. ನಾನು ಪ್ರಸ್ತುತ ದಾವೆಯಲ್ಲಿ ಹಾಜರುಪಡಿಸಿದ ನಿಪಿ.7 ರಿಂದ 11 ದಾಖಲೆಗಳಿಗೆ ಮತ್ತು ದಾವಾ ಆಸ್ತಿಗೆ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನಿಪಿ.11 ದಾಖಲೆಯನ್ನು ದಾವೆ ಸಲುವಾಗಿ ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ. ನನಗೆ ದಾವಾ ಆಸ್ತಿಯಲ್ಲಿ ಯಾವುದೇ ಹಕ್ಕು ಇರದೇ ಇದ್ದರೂ ಸುಳ್ಳು ದಾವೆಯನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ೩ನೇ ಪ್ರತಿವಾದಿಯ ಮಾತುಕೇಳಿ ಸುಳ್ಳು ದಾವೆಯನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದ ಮೇಲೆ ಗಣಕೀಕರಿಸಿದೆ)

ಓ.ಹೇ.ಕೇ.ಸ.ಇದೆ.

ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.
ಹೊಸಕೋಟೆ.